**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4514/2021 ಸಿ.ಡಬ್ಲ್ಯೂ –7 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ದತ್ತಾ |
| ತಂದೆಃ ಗಂಡ | ಃ | ಶ್ರೀಮಂತ ಮೇಲಿನಕೇರಿ |
| ವಯಸ್ಸು | ಃ | ೩೧ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕೊಡಲಹಂಗರಗಾ |

ದಿನಾಂಕಃ೨೩.೦೮.೨೦೨೩
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿಯ ಪರಿಚಯ ಇರುತ್ತದೆ. ಚಾಸಾ-1 ಮೃತ ಅವ್ವಮ್ಮ ಅವರ ಮಗ. ಚಾಸಾ-2 ರಿಂದ 6, 8 ರಿಂದ 13 ರವರ ಪರಿಚಯ ಇರುತ್ತದೆ. ಮೃತ ಅವ್ವಮ್ಮಳ ಪರಿಚಯ ಇರುತ್ತದೆ.

ಮೃತ ಅವ್ವಮ್ಮ ಬಹಿರದೆಸೆಗೆಂದು ಕುಳಿತಾಗ ಕಾರು ಹಾಯ್ದು ಅಪಘಾತವಾಗಿರುತ್ತದೆ. ಸದರಿ ಅಪಘಾತದಿಂದ ಅವರು ಸ್ಥಳದಲ್ಲಿಯೇ ಮೃತರಾಗಿರುತ್ತಾರೆ. ಸದರಿ ಅಪಘಾತದ ವಿಷಯವನ್ನು ನಾನು ಚಾಸಾ-೧ ರವರಿಗೆ ಮನೆಗೆ ಹೋಗಿ ತಿಳಿಸಿರುತ್ತೇನೆ. ಸದರಿ ಅಪಘಾತವಾದ ನಂತರ ಅಲ್ಲಿ ಸಾಕಷ್ಟು ಜನರು ಸೇರಿರುತ್ತಾರೆ. ನಂತರ ಪೋಲಿಸರನ್ನು ಕರೆಯಿಸಿ ಮೃತ ಅವ್ವಮ್ಮಳ ದೇಹವನ್ನು ಪೋಸ್ಟ ಮಾರ್ಟ ಮಾಡಲು ಪೋಲಿಸರು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಸದರಿ ಘಟನೆಯು ದಿ.16.11.2020 ರಂದು ಸಾಯಂಕಾಲ 6.50 ಗಂಟೆ ಸುಮಾರಿಗೆ ಆಗಿರುತ್ತದೆ ಎಂಧರೆ ಸರಿ. ನಾನು, ಚಾಸಾ-8, 9 ರವರು ರಸ್ತೆ ಬದಿಗೆ ಮಾತನಾಡುತ್ತಾ ನಿಂತಾಗ ಸದರಿ ಘಟನೆ ಆಗಿರುತ್ತದೆ ಎಂಧರೆ ಸರಿ. ಕಾರು ಚಾಲಕನು ತನ್ನ ಕಾರನ್ನು ಜೋರಾಗಿ ನಿರ್ಲಕ್ಷತನದಿಂದ ನಡೆಸಿಕೊಂಡು ಬಂದು ಮೃತ ಅವ್ವಮ್ಮಳಿಗೆ ಹಾಯಿಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತದಿಂದ ಮೃತ ಅವ್ವಮ್ಮಳಿಗೆ ಬಲಹುಬ್ಬಿಗೆ, ಬಲಕಾಲಿಗೆ, ಎಡಕಿವಿಗೆ, ಎಡಕೈ, ಮುಂಗೈಗೆ, ಎದೆಗೆ, ಹೊಟ್ಟೆಗೆ ಭಾರಿ ಗಾಯಗಳಾಗಿರುತ್ತವೆ ಎಂದರೆ ಸರಿ. ಸದರಿ ಅಪಘಾತಪಡಿಸಿದ ವಾಹನ ಸಂಖ್ಯೆ ಕೆ.ಎ 05-ಎಂ.ಸಿ.0130 ಇರುತ್ತದೆ ಎಂಧರೆ ಸರಿ. ಸದರಿ ಅಪಘಾತಪಡಿಸಿದ ಚಾಲಕನ ಹೆಸರು ರಾಹುಲ್ ಎಂದು ತಿಳಿಯಿತು ಎಂದರೆ ಸಾಕ್ಷಿ ಅವರ ಹೆಸರನ್ನೇ ವಿಚಾರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನ್ಯಾಯಾಲಯದ

ಮುಂದೆ ಇರುವ ಆರೋಪಿಯನ್ನು ತೋರಿಸಿ ಸದರಿ ರಾಹುಲ್ ಇವನೇ ಸದರಿ ವಾಹನದ ಚಾಲಕ ಎಂದು ತೋರಿಸಿದಾಗ ಅವನ ಹೆಸರು ನನಗೆ ಗೊತ್ತಿರುವುದಿಲ್ಲ, ಆದರೆ ಚಾಲಕ ಇವನೇ ಎಂದು ನುಡಿಯುತ್ತಾರೆ. ಸದರಿ ಕಾರಿನಲ್ಲಿ ಚಾಸಾ-4 ರವರು ಇದ್ದರು ಅವರಿಗೂ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ</u>** <u>ಶ್ರೀ ಆರ್.ಜೆ.ಪಿ.</u> **<u>ವಕೀಲರಿಂದ</u>**

ರಸ್ತೆ ಬಿಟ್ಟು ಸುಮಾರು 15 ಫೀಟು ಅಂತರದಲ್ಲಿ ಮೃತ ಅವ್ವಮ್ಮ ಬಹಿರ್ದೆಸೆಗೆ ಕುಳಿತಿದ್ದಳು. ರಸ್ತೆಯ ಪಕ್ಕದಲ್ಲಿ ತಗ್ಗು ದಿಣ್ಣೆಗಳು ಇವೆ ಎಂದರೆ ಸರಿ. ರಸ್ತೆಯ ಪಕ್ಕದಲ್ಲಿ ತಗ್ಗುದಿಣ್ಣೆಗಳು ಇವೆ ಎಂದು ಹೇಳುತ್ತೀರಲ್ಲ ಅವು ಎಷ್ಟು ಫೀಟು ಆಳ ಇವೆ ಎಂಧರೆ ಸಾಕ್ಷಿ ಅವು ಇಳಿಜಾರು ಇರುತ್ತವೆ ಎಷ್ಟು ಫೂಟು ಇವೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತವು ಬಸ್ ಸ್ಟ್ಯಾಂಡದಿಂದ 200-300 ಮೀಟರ್ ದೂರದಲ್ಲಿ ಆಗಿರುತ್ತದೆ. ಕೊಡಲಹಂಗರಗಾ ಬಸ್ ಸ್ಟ್ಯಾಂಡ ಹತ್ತಿರ ಸಾಕಷ್ಟು ಜನದಟ್ಟಣೆ ಇರುತ್ತದೆ ಎಂಧರೆ ಸರಿ. ಬಸ್ ಸ್ಟ್ಯಾಂಡ ದಾಟಿ ಸ್ವಲ್ಪ ಮುಂದೆ ರಸ್ತೆಯ ಎರಡೂ ಬದಿಗೆ ರಸ್ತೆ ತಡೆಗಳು ಹಾಕಿರುತ್ತಾರೆ ಎಂಧರೆ ಸರಿ. ಸದರಿ ರಸ್ತೆ ತಡೆಗಳು ಬಸ್ ಸ್ಟ್ಯಾಂಡದಿಂದ ಎಷ್ಟು ದೂರದಲ್ಲಿವೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಕೊಡಲ ಹಂಗರಗಾ ಬಸ್ ನಿಲ್ದಾಣದ ಬಳಿ ಸಾಕಷ್ಟು ಜನದಟ್ಟಣೆ ಇರುವುದರಿಂದ ಮತ್ತು ರಸ್ತೆಯ ಎರಡೂ ಕಡೆಗೆ ರಸ್ತೆ ತಡೆಗಳು ಇದ್ದ ಕಾರಣ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂಧರೆ ಸರಿ. ಮೃತ ಅವ್ವಮ್ಮ ನಮ್ಮ ಊರಿನವರೇ, ನಮ್ಮ ದೂರದ ಸಂಬಂಧಿ ಇರುತ್ತಾರೆ. ಮೃತ ಅವ್ವಮ್ಮ ಹೃದಯಾಘಾತದಿಂದ ತೀರಿಕೊಂಡಿರುತ್ತಾಳೆ, ರಸ್ತೆ ಅಪಘಾತ ಪರಿಹಾರ ಪಡೆಯಬೇಕೆನ್ನುವ ಉದ್ದೇಶದಿಂದ ಚಾಸಾ-೧ ರವರು ನಾನು ಮಿಲಾಪಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೧ ರವರು ಪೋಲಿಸರೊಂದಿಗೆ ಮಿಲಾಪಿಯಾಗಿ ಖೊಟ್ಟಿ ಪ್ರಕರಣವನ್ನು ದಾಖಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ. ಆರೋಪಿ ಸದರಿ ವಾಹವನ್ನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ಅಪಘಾತಪಡಿಸಿರುತ್ತಾನೆ. ಸದರಿ ಅಪಘಾತದಿಂದ ಚಾಸಾ-೧ ರವರ ತಾಯಿ ಮೃತಪಟ್ಟಿರುತ್ತಾಳೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನನ್ನ ಹೇಳಿಕೆಯನ್ನು ಪೊಲಿಸರು ಘಟನೆ ಆದ ಎರಡು ದಿನಗಳ ನಂತರ ಪಡೆದುಕೊಂಡಿರುತ್ತಾರೆ. ಖೊಟ್ಟಿ ಫಿರ್ಯಾದಿಯನ್ನು ಚಾಸಾ-೧ ರವರು ನೀಡಿರುತ್ತಾರೆ ಅದಕ್ಕೆ ಪೂರಕವಾಗಲಿ ಎಂಧು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಯಾವುದೇ ಘಟನೆ ನಡೆದಿರುವುದಿಲ್ಲ ಆರೋಪಿಗೂ ಘಟನೆಗೂ ಸಂಬಂಧವಿರುವುದಿಲ್ಲ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ